# ಸತ್ಯವೆ ಸೌಂದರ್ಯ ಸೌಂದರ್ಯವೆ ಸತ್ಯ

**ಕೋ. ಚೆನ್ನಬಸಪ್ಪ**

**ಭಗವಂತನ ವಿರಾಟ್‌ರೂಪದ ಆರಾಧನೆಯ ಒಂದು ವಿಶಿಷ್ಟ ವೈಖರಿಯನ್ನು ಪ್ರತಿಬಿಂಬಿಸಿರುವ ಶ್ರೀಮಾನ್ ಕೋ.ಚೆನ್ನಬಸಪ್ಪನವರು ಕನ್ನಡದ ಖ್ಯಾತ ಸಾಹಿತಿಗಳಲ್ಲಿ ಒಬ್ಬರು. ಹಲವು ಧಾರ್ಮಿಕ ಗ್ರಂಥಗಳನ್ನು ಕನ್ನಡಕ್ಕೆ ಅವರು ಅನುವಾದಿಸಿದ್ದಾರೆ.**

ಆಂಗ್ಲಕವಿ ಕೀಟ್ಸ್ ಎಂಬಾತ "ಸತ್ಯವೆ ಸೌಂದರ್ಯ; ಸೌಂದರ್ಯವೆ ಸತ್ಯ"—Truth is beauty; beauty is truth ಎಂಬ ಮಾತನ್ನು ಹೇಳುತ್ತಾನೆ. ಹೀಗೆಂದರೇನು?

ಬೆಂಗಳೂರಿನಲ್ಲಿರುವವರು, ಬೆಂಗಳೂರಿಗೆ ಬರುವವರು ಲಾಲ್ ಬಾಗ್ ಉದ್ಯಾನವನ ನೋಡುವ ಅವಕಾಶ ತಪ್ಪಿಸಿಕೊಳ್ಳುವುದಿಲ್ಲ. ಅಲ್ಲಿನ ವೃಕ್ಷಸಂಪತ್ತನ್ನು ಪುಷ್ಪರಾಶಿಯನ್ನು ಕಣ್ತುಂಬ ನೋಡಿ ಸಂತೋಷಪಡುತ್ತಾರೆ. ಅದರಲ್ಲೂ ಗಣರಾಜ್ಯೋತ್ಸವ, ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಪುಷ್ಪಪ್ರದರ್ಶನ ಏರ್ಪಡಿಸಿ ಕಣ್ಣಿಗೆ ಹಬ್ಬವನ್ನೂ ಮನಸ್ಸಿಗೆ ಮುದವನ್ನೂ ಪಡೆಯುತ್ತಾರೆ. ಈ ವರ್ಷ ೧೫೦೦ ಬಗೆಯ ಗುಲಾಬಿ ಹೂಗಳ ಪ್ರದರ್ಶನವನ್ನು ನೋಡಿ ಆಶ್ಚರ್ಯಪಟ್ಟರು! ಗುಲಾಬಿ ಹೂವಿನಲ್ಲಿಯೆ ೧೫೦೦ ಜಾತಿಗಳು. ಏನಿದು ಭಗವಂತನ ಮಾಯೆ ಎಂದು ತಮಗೆ ತಾವೇ ಅಂದುಕೊಳ್ಳುತ್ತ ಹೂವುಗಳನ್ನು ನೋಡುತ್ತಿದ್ದರು ಎಷ್ಟೊ ಜನ.

ಏನಿದು ಈ ಸೃಷ್ಟಿ ವೈಚಿತ್ರ್ಯ! ಒಂದೇ ನೆಲ; ಒಂದೇ ಜಲ; ಅದೇ ಸೂರ್ಯನ ಕಿರಣ, ಗೊಬ್ಬರವೂ ಒಂದೇ ಬಗೆಯದು. ಒಂದೇ ಮಡಿಯಲ್ಲಿ ಒಂದರ ಪಕ್ಕದಲ್ಲಿ ಒಂದು ಬೆಳೆದ ಎರಡು ಗುಲಾಬಿ ಗಿಡಗಳಲ್ಲಿ ಒಂದು ಕೆಂಪು; ಒಂದು ಹಳದಿ; ಮತ್ತೊಂದು ನೀಲಿ.... ಹೀಗೇ ಎಷ್ಟೋ ಬಗೆಬಗೆಯ ಬಣ್ಣಗಳು. ಕತ್ತೆತ್ತಿ ನೋಡಿದರೆ ಎಷ್ಟು ಬಗೆಬಗೆಯ ಗಿಡಮರ ಬಳ್ಳಿಗಳು. ಎಲ್ಲವೂ ಒಂದೇ ಉದ್ಯಾನದ ಒಂದೇ ಭೂಮಿಯಲ್ಲಿ ಬೆಳೆದ ವೃಕ್ಷ ಸಂಪತ್ತು! ಏನಿದು ವೈಚಿತ್ರ್ಯ! ಹಾಗೆಯೇ ಗಿಡದಿಂದ ಗಿಡಕ್ಕೆ ಹಾರುವ ಪಕ್ಷಿಸಂಕುಲವನ್ನು ನೋಡಿದರೆ ಅವುಗಳ ವರ್ಣ ವೈವಿಧ್ಯದ ಅದ್ಭುತ-ವರ್ಣಸಂಯೋಜನೆ ಏನು? ಆಗ ಕನಕದಾಸರ ಹಾಡು ನೆನಪಾಗುತ್ತದೆ: "ಗಿಳಿಗೆ ಹಸಿರು ಬಳಿದವರಾರು; ಹವಳಕ್ಕೆ ಕೆಂಪು ಬಳಿದವರಾರು?" ಈ ವೈವಿಧ್ಯಮಯ ವೃಕ್ಷರಾಶಿ, ಪಕ್ಷಿ ಸಂಕುಲ, ಪುಷ್ಪಕೋಟಿ ಹೇಗಾಯಿತು? ಏತರಿಂದ ಆಯಿತು!! ಹೇಗಾಯಿತು ಎಂಬುದಕ್ಕೆ ಉತ್ತರ ಸಿಕ್ಕೀತು. ಬೀಜದಿಂದ ವೃಕ್ಷವಾಯಿತು ಎಂಬುದು ಎಲ್ಲರಿಗೂ ಗೊತ್ತು. ಆ ಬೀಜ ಯಾತರಿಂದ ಆಯಿತು? ಅದಕ್ಕೆ ಉತ್ತರ ಯಾರಿಂದಲೂ ಸಿಕ್ಕಿಲ್ಲ. ಅದು ಸಿಕ್ಕುವುದೂ ಇಲ್ಲ. ಯಾಕೆಂದರೆ ಅದು ಬುದ್ಧಿಗ್ರಾಹ್ಯವಲ್ಲ; ಇಂದ್ರಿಯವೇದ್ಯವಲ್ಲ. ಈ ಸಮಸ್ಯೆಗೆ ಉತ್ತರ ಸಿಗುವುದಿಲ್ಲ ಎಂಬುದನ್ನು ಉಪನಿಷತ್ಕಾರರು ಒಂದು ದೃಷ್ಟಾಂತದಿಂದ ತಿಳಿಸಿದ್ದಾರೆ. ಆಲದ ಮರದ ಬೀಜವನ್ನು ಒಡೆದು ಅದರಲ್ಲಿ ಏನಿದೆ? ಏನೂ ಕಾಣದು. ಆದರೆ ಆ ಬೀಜದಿಂದಲೆ ಆಲದ ಬೃಹತ್ ವೃಕ್ಷ ಹುಟ್ಟಿ ಬೆಳೆದು ಹೆಮ್ಮರವಾಗುತ್ತದೆ. ಯಾವುದೋ ಒಂದು ಶಕ್ತಿ ಆ ಬೀಜದಲ್ಲಿದೆ. ಅದೇ ಮರವಾಗಿದೆ, ಹೂವಾಗಿದೆ, ಹಣ್ಣಾಗಿ ಬೀಜಕೊಡುತ್ತದೆ.

ಹೀಗೆಯೇ ಲಾಲ್‌ಬಾಗ್‌ನಲ್ಲಿ ಪ್ರದರ್ಶನಕ್ಕಿಟ್ಟ ೧೫೦೦ ಗುಲಾಬಿ ಹೂವುಗಳಿಗೂ ಆ ಒಂದು ಶಕ್ತಿಯೇ ಮೂಲ. ಆ ಶಕ್ತಿಯೇ ಅಷ್ಟೊಂದು ಸುಂದರ ರೂಪತಾಳಿದೆ. ಆ ಶಕ್ತಿಯನ್ನು ಕೀಟ್ಸ್ "ಸತ್ಯ" ಎಂದು ಕರೆದ. ಅದೇ ಸೌಂದರ್ಯವಾಗಿ ಅರಳಿ ಆಕಾರ ತಾಳಿದೆ. ಅದು ರೂಪತಳೆದ ಸೌಂದರ್ಯ. "ರೂಪವತಿ" ಎಂಬ ಹೆಸರಿನಲ್ಲಿ ಆಕಾರರೂಪೀ ಮತ್ತು ಸುಂದರಿ ಎಂಬ ಎರಡು ಅರ್ಥಗಳೂ ಸೇರಿವೆ. ಅದನ್ನು ಶ್ರೀಅರವಿಂದಾಶ್ರಮದ ಶ್ರೀಮಾತೆ "Beauty is Divinity in Form"—"ಸೌಂದರ್ಯ ಆಕಾರ (ರೂಪ) ತಳೆದ ದೈವ" ಎಂದಿದ್ದಾರೆ. ಕೀಟ್ಸ್ ಹೇಳಿದ "Beauty is Truth; Truth is beauty ಎಂಬ ಮಾತಿನ ಅರ್ಥವೂ ಅದೆ.

ಹೀಗೆ ಎಲ್ಲೆಲ್ಲಿಯೂ ದೈವವೇ, ಶಕ್ತಿರೂಪಿಣಿಯೆ ಪ್ರತ್ಯಕ್ಷವಾಗಿ ಪ್ರಕಟವಾಗಿದೆ. ಅದು ಕೇವಲ ಪಕ್ಷಿ, ವೃಕ್ಷ, ಪುಷ್ಪಗಳಿಗೇ ಸೀಮಿತವಾಗಿಲ್ಲ. ಕಲ್ಲಿನಂಥ ನಿರ್ಜೀವ ಜಡವಸ್ತುವಿನಲ್ಲೂ ಸಾಕ್ಷಾತ್ ಕಣ್ಣಿಗೆ ಕಾಣುತ್ತದೆ. ಎಂದಾದರೂ ಬಣ್ಣಬಣ್ಣದ ಕಲ್ಲುಚಪ್ಪಡಿಗಳ ಅಂಗಡಿಗೆ ಹೋಗಿ ನೋಡಿದರೆ ಆ ಬಂಡೆಗಳ ಬಣ್ಣವೈವಿಧ್ಯ—ಹಸಿರು, ಹವಳಗೆಂಪು, ಕಪ್ಪು, ಹಾಲುಗಲ್ಲು...... ಇನ್ನು ವರ್ಣಿಸಲು ಬಾರದಂಥ ವಿನ್ಯಾಸದಿಂದ ರೂಪತಳೆದದ್ದನ್ನು ಕಣ್ಣಾರೆ ಕಾಣಬಹುದು; ಕೈ ಮುಟ್ಟಿ ಅನುಭವಿಸಬಹುದು. ಹಾಸನದ ಹಸಿರು ಶಿಲೆ, ಇಳಕಲ್ಲ ಹವಳದ ಬಣ್ಣದ ಶಿಲೆ, ಶಿರಾದ ಕಂದು ಶಿಲೆ, ದೊಡ್ಡಬಳ್ಳಾಪುರದ ಕಗ್ಗಲ್ಲು ಎಲ್ಲದರಲ್ಲೂ ಅದೇ ಶಕ್ತಿಯೆ ವಿವಿಧ ರೂಪ, ಕಾಠಿಣ್ಯ, ಸೌಂದರ್ಯ ತಾಳಿದೆ. ಇದೇನಿದು ಮಾಯೆ ಎಂದು ನಿಬ್ಬೆರಗಾಗುತ್ತೇವೆ.

ಇದನ್ನು ಭೌತವಿಜ್ಞಾನವೂ ಒಪ್ಪಿಕೊಂಡಿದೆ. ಇಜ್ಜಲೂ ವಜ್ರವೂ ಒಂದೇ ಧಾತು ಅಥವಾ ಉಪಾದಾನ (substance - stuff)ನಿಂದ ಆಗಿದೆ ಎಂದು ವಿಜ್ಞಾನವೇ ಹೇಳುತ್ತದೆ. ಎರಡೂ ಇಂಗಾಲ ಎಂಬ ಧಾತುವಿನಿಂದಲೇ ಆಗಿವೆ. ಅಣು ವಿಜ್ಞಾನಿಗಳು ಹೇಳುವಂತೆ ಅಣುಗಳು ಪರಮಾಣುಗಳು (Electrons, protons) ವಿವಿಧ ಪ್ರಮಾಣದಲ್ಲಿ ಕೂಡಿದರೆ ಒಂದು ವಜ್ರವಾಗುತ್ತದೆ, ಇನ್ನೊಂದು ಇಜ್ಜಲಾಗುತ್ತದೆ ಎಂದು ಕಂಡಿದ್ದಾರೆ. ಹಾಗಾದರೆ ಅಣು, ರೇಣು, ತೃಣ, ಕಾಷ್ಠ, ವೃಕ್ಷ, ಪಕ್ಷಿ, ಪುಷ್ಪ... ಪಶುಪ್ರಾಣಿ ಮಾನವ ಎಲ್ಲರಲ್ಲೂ ಅದೇ ಶಕ್ತಿ ಇದೆ ಎಂಬುದು ಕಣ್ಣಿಗೇ ಕಾಣುತ್ತದೆ. ಅದನ್ನು ಅನುಕೂಲತೆಗಾಗಿ "ತತ್" ಎಂದಿದ್ದಾರೆ, ದೇವರು ಎಂದಿದ್ದಾರೆ. ಯಾವ ಹೆಸರಿನಿಂದ ಕರೆದರೂ ಇರುವುದೊಂದೆ ಸತ್ಯ, ವಿನಾಶವಾಗದ ಸತ್ಯ. ಹಾಗಾದರೆ ಅದನ್ನು ಹುಡುಕಿಕೊಂಡು ಗುಡಿ ಚರ್ಚು ಮಸೀದಿಗಳಿಗೆ ಯಾಕೆ ಹೋಗಬೇಕು? ಕಣ್ಣು ತೆರೆದರೆ ಎದುರಿಗೇ ಆ ದೈವ ಕಾಣುತ್ತದೆ! ಆಗ ಅಕ್ಕಮಹಾದೇವಿಯಂತೆ ನಾವೂ ಹಾಡಬಹುದು: "ವನವೆಲ್ಲ ನೀನೇ; ವನದೊಳಗಿನ ತರುವೆಲ್ಲ ನೀನೇ, ಶ್ರೀಚೆನ್ನಮಲ್ಲಿಕಾರ್ಜುನ." ◆